ಹೆಚ್ಚಿಗೆ ದರವನ್ನು ವಸೂಲಿ ಮಾಡುವಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ, ಅಂತಹ ಪ್ರಕರಣಗಳಲ್ಲಿ ಚಾಲಕರ/ಮಾಲೀಕರ ವಿರುದ್ಧ ಮೊಕದ್ದಮೆಯನ್ನು ದಾಖಲಿಸುವುದು ಹಾಗೂ ದಂಡವನ್ನು ವಸೂಲಿ ಮಾಡುವ ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಇಲ್ಲ.

256 (639) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನರಸಿಂಹರಾಜಪುರ ತಾಲ್ಲೂಕು ಹೊನ್ನೆಕುಡಿಗೆ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದರ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

257(640) : Sri Jeevaraj D.N. (Sringeri)

a) Whether it has come to the notice of Government that because of the development of IT Parks only in the Hosur Road and because of hike in the sales tax structure in the State, computers and its accessories are purchased from Hosur; if so what are the steps taken by the government;

b) Hasn't the continued development of IT Parks in Hosur Road aggravated the traffic density;

c) Whether Government considers development of IT Parks in the areas like Mysore Road, Hassan & Tumkur Roads to ensure comprehensive Balanced growth?

Sri Dharm Singh (Chief Minister)-

a) No. Does not arise

b) Government had initially established Electronics city in Hosur Road for the growth of electronic industries. In the same area, STPI has also been established to provide necessary bandwidth and other facilities to IT companies As such more number of IT companies have

been established in this area. In order to overcome the problem of overcrowding of vehicles in this area, Government has developed EPIP Industrial Estate in Whitefield area and IT companies are setting up their operations in this area.

c) IT Parks are being developed by private builders and while building the IT Parks, the developers are selecting the site which is well accessed with suitable bandwidth, STPI connectivity etc., which are the basic needs of IT companies to set up their operations. Of late, IT companies are also setting up their operations in the areas of Mysore Road and Tumkur Road.

258 (879) : ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳಾವುವು;

ಆ) ನೀರಾವರಿ ಯೋಜನಾವಾರು 31.10.04ಕ್ಕೆ ಅಂದಾಜು ಮೊತ್ತ ಹಾಗೂ ಇನ್ನು ವೆಚ್ಚ ಮಾಡಬೇಕಾದ ಮೊತ್ತವೆಷ್ಟು;

ಇ) ಯೋಜನಾವಾರು ನಿಗದಿಪಡಿಸಿದ ನೀರಿನ ಟಿ.ಎಂ.ಸಿ. ಪ್ರಮಾಣ, ಬಳಸಿದ ನೀರಿನ ಪ್ರಮಾಣ ಹಾಗೂ ಇನ್ನು ಬಳಸಬೇಕಾದ ನೀರಿನ ಪ್ರಮಾಣ 31.10.04ಕ್ಕೆ ಎಷ್ಟು;

ಈ) ಯೋಜನಾವಾರು ನೀರಾವರಿಗೆ ಒಳಪಡಿಸಬೇಕಾದ ಜಮೀನು ಕ್ಷೇತ್ರ ಹಾಗೂ ಇನ್ನು ನೀರಾವರಿಗೆ ಒಳಪಡಿಸಬೇಕಾದ ಕ್ಷೇತ್ರ 31.1.04ಕ್ಕೆ ಎಷ್ಟು (ಹೆಕ್ಟೇರುಗಳಲ್ಲಿ ವಿವರ ನೀಡುವುದು);

ಉ) ಈ ನೀರಾವರಿ ಯೋಜನೆಗಳು ಪೂರ್ತಿಗೊಂಡ ದಿನಾಂಕ ಹಾಗೂ ಇನ್ನು ಪೂರ್ತಿಗೊಳ್ಳಬೇಕಾದ ಯೋಜನೆಗಳ ದಿನಾಂಕವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ ಸಂಖ್ಯೆ ಅನುಕ್ರಮವಾಗಿ 40 ಹಾಗೂ 51. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಅಂದಾಜು ಮೊತ್ತ ಈವರೆಗಿನ ವೆಚ್ಚ ಹಾಗೂ ಬಾಕಿ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಯೋಜನಾವಾರು ನಿಗದಿಪಡಿಸಲಾದ ನೀರಿನ ಪ್ರಮಾಣ, ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಈ) ಯೋಜನಾವಾರು ಉದ್ದೇಶಿತ ನೀರಾವರಿ ಕ್ಷೇತ್ರ ದಿನಾಂಕ: 31.10.4ಕ್ಕೆ ಸೃಷ್ಟಿಸಲಾದ ನೀರಾವರಿ ಕ್ಷೇತ್ರ ಹಾಗೂ ಬಾಕಿ ಕ್ಷೇತ್ರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಉ) ಪೂರ್ಣಗೊಳಿಸಲಾಗಿರುವ ಯೋಜನೆಗಳ ಇಸವಿ ಹಾಗೂ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಿರುವ ವರ್ಷಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.